- ಕೆಎಸ್ಎಸ್ಐಡಿಸಿ ಸಂಸ್ಥೆಯ ವತಿಯಿಂದ ಸದರಿ ಕ್ಷೇತ್ರ ವ್ಯಾಪ್ತಿಯಲ್ಲಿ 25 ಎಕರೆ ವಿಸ್ತೀರ್ಣದಲ್ಲಿ ಕೈಗಾರಿಕಾ ವಸಹಾತುಗಳನ್ನು ಅಭಿವೃದ್ಧಿಪಡಿಸಿ, 120 ಮಳಿಗೆ / ನಿವೇಶನಗಳನ್ನು ಕೈಗಾರಿಕಾ ಘಟಕಗಳಿಗೆ ಹಂಚಿಕೆ ಮಾಡಿರುತ್ತದೆ.
- 26 ಸಣ್ಣ ಕೈಗಾರಿಕೆಗಳಿಗೆ ₹ 193.85 ಲಕ್ಷ ಸಹಾಯಧನ ಬಿಡುಗಡೆ ಮಾಡಲಾಗಿದೆ.
- ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ 19 ಫಲಾನುಭವಿಗಳಿಗೆ ₹ 154.47 ಲಕ್ಷಗಳ ಸಾಲ ಮಂಜೂರಾಗಿರುತ್ತದೆ.

ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ಅವ್ಯವಹಾರಗಳು

39(133); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು)

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯೀಸ್ ವೆಲ್ಫೇರ್ ಅಸೋಷಿಯೇಷನ್ ಗೆ ದಿನಾಂಕ: 19–04–2006 ರ ಸರ್ಕಾರಿ ಆದೇಶದಂತೆ ಪ್ರಾಧಿಕಾರದ ನೌಕರರಿಗೆ ನಿವೇಶನ ಹಂಚಿಕೆ ಮಾಡುವ ಸಲುವಾಗಿ ಎಷ್ಟು ಎಕರೆ ಜಮೀನನ್ನು ನೀಡಲಾಗಿದೆ ಮತ್ತು ಎಷ್ಟು ಎಕರೆ ಜಮೀನನನ್ನು ನೀಡಬೇಕಾಗಿದೆ.

ಆ) ಪ್ರಾಧಿಕಾರದ ತನ್ನ ನೌಕರರಿಗೆ ನಿವೇಶನ ಹಂಚಿಕೆ ಸಲುವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜೊತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ ಸಂಘವು ಪತ್ರ ವ್ಯವಹಾರವನ್ನು ಮಾಡಿರುವುದು ನಿಜವೇ:

ಇ) ಹಾಗಿದ್ದಲ್ಲಿ, ನಿವೇಶನ ಹಂಚಿಕೆ ಮಾಡಲು ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘದ ಬದಲು ಬೆಂಗಳೂರು

ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ಗೆ ವಿತರಿಸಲು ಕಾರಣವೇನು:

ಈ) ನಿವೇಶನ ಹಂಚಿಕೆಗೆ ನೀಡಿರುವ ಜಮೀನು ಸರ್ಕಾರಿ ಅಥವಾ ಹಿಡುವಳಿ ಜಮೀನಾಗಿದೆಯೇ: ಹಿಡುವಳಿ ಜಮೀನಾಗಿದ್ದಲ್ಲಿ ಯಾರ್ಯಾರಿಂದ ಎಷ್ಟೆಷ್ಟು ಜಮೀನು ತೆಗೆದುಕೊಳ್ಳಲಾಗಿದೆ: ಹಿಡುವಳಿ ಜಮೀನು ನೀಡಿದವರಿಗೆ ನಿವೇಶನ ವಿತರಿಸಲಾಗಿದೆಯೇ: ಹೌದಾದಲ್ಲಿ, ಎಷ್ಟು ನಿವೇಶನಗಳನ್ನು ಯಾರ್ಯಾರಿಗೆ ವಿತರಿಸಲಾಗಿದೆ: (ಹೆಸರು, ನೀಡಿರುವ ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ ಮತ್ತು ನೀಡಿರುವ ನಿವೇಶನ ಸಂಖ್ಯೆವಾರು ವಿವರ ತಿಳಿಸುವುದು)

ಉ) ಈ ಜಮೀನಿನಲ್ಲಿ ಒಟ್ಟು ಎಷ್ಟು ನಿವೇಶನಗಳನ್ನು ರಚಿಸಲಾಗಿದೆ: ಅದರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ನಲ್ಲಿ ನಿವೇಶನಕ್ಕಾಗಿ ಸದಸ್ಯತ್ವ ಪಡೆದ ಹಾಲಿ ಮತ್ತು ನಿವೃತ್ತ ನೌಕರರ ಸಂಖ್ಯೆ ಎಷ್ಟು: ಸದಸ್ಯರು ಪಾವತಿ ಮಾಡಿರುವ ಹಣ ಎಷ್ಟು: ನಿವೇಶನ ಪಡೆದಿರುವವರು ಯಾರ್ಯಾರು, ಉಳಿದವರಿಗೆ ಯಾವಾಗ ನೀಡಲಾಗುವುದು: (ಹೆಸರು, ನೋಂದಣಿ ಸಂಖ್ಯೆ ಮತ್ತು ಪಾವತಿಸಿರುವ ಹಣದ ವಿವರ ನೀಡುವುದು)

ಊ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನು ಹೊರತುಪಡಿಸಿ, ಎರವಲು ಸೇವೆಯ ನೌಕರರು, ಇತರೆ ಇಲಾಖೆಗಳವರಿಗೆ ಮತ್ತು ಸಾರ್ವಜನಿಕರಿಗೆ ನಿವೇಶನ ವಿತರಿಸಿರುವುದು ನಿಜವೇ; (ಹೆಸರು, ಪಾವತಿಸಿರುವ ಹಣ ಮತ್ತು ನಿವೇಶನ ಸಂಖ್ಯೆಯ ವಿವರ ನೀಡುವುದು);

ಋ) ಈ ಅಸೋಸಿಯೇಷನ್ ನಲ್ಲಿ ನಡೆದಿರುವ ಸಮಗ್ರ ಅವ್ಯವಹಾರಗಳನ್ನು ಸರ್ಕಾರಿ ಆದೇಶ ಸಂಖ್ಯೆ: ನಅಇ 228 ಬೆಂಆಸೇ 2013, ದಿನಾಂಕ 02–09–2013 ರಂತೆ ತನಿಖೆ ನಡೆಸಲು ಆದೇಶವಾಗಿರುವುದು

ನಿಜವೇ; ಹಾಗಿದ್ದಲ್ಲಿ, ಇಲ್ಲಿಯವರೆಗೂ ಏಕೆ ತನಿಖೆ ನಡೆಸಿಲ್ಲ; ತನಿಖೆ ನಡೆಸಲು ಇರುವ ಅಡ್ಡಿ–ಆತಂಕಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ದಿನಾಂಕ:19–04–2006 ರ ಸರ್ಕಾರದ ಆದೇಶದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಿಡಿಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್ ಪರವಾಗಿ 42 ಎಕರೆ 15.5 ಗುಂಟೆ ಜಮೀನನ್ನು ಸಗಟು ಹಂಚಿಕೆ ಮಾಡಲಾಗಿದ್ದು, ಬಾಕಿ 02 ಎಕರೆ 24.5 ಗುಂಟೆ ಜಮೀನನ್ನು ನೀಡಬೇಕಾಗಿರುತ್ತದೆ.

ಆ) ಹೌದು.

ಇ) ಪ್ರಾಧಿಕಾರವು ಜಮೀನನ್ನು ಬೆಂಗಳೂರು ಅಭಿವದ್ಧಿ ಪ್ರಾಧಿಕಾರದ ನೌಕರರ ಸಂಘಕ್ಕೆ ಹಂಚಿಕೆ ಮಾಡಿದ್ದು, ಕ್ರಯವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವೆಲ್ಫೇರ್ ಅಸೋಸಿಯೇಷನ್ ಗೆ ಮಾಡಿಕೊಟ್ಟಿರುತ್ತದೆ.

ಈ) ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ, ದೊಟ್ಟಕಲ್ಲಸಂದ್ರ ಗ್ರಾಮದ ಸರ್ವೆ ನಂ.16 ಮತ್ತು 17 ಈ ಜಮೀನುಗಳು ಪ್ರಾಧಿಕಾರದ ಅಂತಿಮ ಅಧಿಸೂಚನೆಯಂತೆ ಸರ್ಕಾರಿ ಗೋಮಾಳ ಜಮೀನಾಗಿರುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15ರ ಜಮೀನು ಪ್ರಾಧಿಕಾರದ ಅಂತಿಮ ಅಧಿಸೂಚನೆಯಂತೆ ಸರ್ಕಾರಿ ಗೋಮಾಳ ಮತ್ತು ಸಿದ್ದಲಿಂಗಯ್ಯ ಮತ್ತು ಇತರರ ಹೆಸರಿನಲ್ಲಿ ಅಧಿಸೂಚನೆಯಾಗಿರುತ್ತದೆ. (ಐತೀರ್ಪಿನ ಅನುಮೋದನೆಯಂತೆ)

ಮೇಲೆ ತಿಳಿಸಿರುವ ಸರ್ವೆ ನಂಬರುಗಳ ಬಾಬ್ತು ಯಾರಿಗೂ ನಿವೇಶನಗಳನ್ನು ನೀಡಿರುವುದು ಕಂಡುಬರುತ್ತಿಲ್ಲ.

ಊ) ಬೆಂಗಳೂರು ಅಬಿವೃದ್ಧಿ ಪ್ರಾಧಿಕಾರ ನೌಕರರ ಕ್ಷೇಮಾಭಿವೃದ್ಧಿ ಸಂಘವು ಜಿಲ್ಲಾ ನೊಂದಣಾಧಿಕಾರಿಗಳು, ಬೆಂಗಳೂರು, ಕರ್ನಾಟಕ ಸರ್ಕಾರ ಇವರಲ್ಲಿ ನೊಂದಾಯಿಸಲ್ಪಟ್ಟ ಸಂಘವಾಗಿದ್ದು, ಸದರಿ ಸಂಘದ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಯಾವುದೇ ಅಧಿಕಾರ ಇರುವುದಿಲ್ಲ. ಹಾಗೂ ಸದರಿ ಸಂಘವು ಅವರ ಸಂಘದ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಿರುವ ವಿವರಗಳನ್ನು ಪ್ರಾಧಿಕಾರಕ್ಕೆ ನಿಡಿರುವುದಿಲ್ಲ. ಈ ಬಗ್ಗೆ ಪ್ರಾಧಿಕಾರಕ್ಕೆ ಮಾಹಿತಿ ಇರುವುದಿಲ್ಲ.

ಋ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ 42 ಎಕರೆ 151/2 ಗುಂಟೆ ಜಮೀನನ್ನು ಸಗಟು ಹಂಚಿಕೆ ಮಾಡಲಾಗಿದೆ.

ಸದರಿ ಸಂಘವು ಎರವಲು ಸೇವೆಯ ನೌಕರರು, ಇತರೆ ಇಲಾಖೆಗಳವಗೆ ಮತ್ತು ಸಾರ್ವಜನಿಕರಿಗೆ ನಿವೇಶನ ವಿತರಿಸಿರುವುದರ ಬಗ್ಗೆ ಪ್ರಾಧಿಕಾರದಲ್ಲಿ ಮಾಹಿತಿ ಇರುವುದಿಲ್ಲ.

ಋ) ಸರ್ಕಾರದ ಆದೇಶ ಸಂಖ್ಯೆ ನಅಇ 228 ಬೆಂಆಸೇ 2013, ಬೆಂಗಳೂರು, ದಿನಾಂಕ 02–09–2013 ರಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಸಗಟು ಜಮೀನು ಮಂಜೂರು ಮಾಡಿರುವ ಬಗ್ಗೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಸಂಘವು ಸಗಟು ಹಂಚಿಕೆಯಲ್ಲಿ ಪಡೆದ ಜಮೀನಿನಲ್ಲಿ ನಿವೇಶನಗಳನ್ನು ನಿಯಮಾವಳಿಯನ್ವಯ ಅರ್ಹ ನೌಕರರಿಗೆ ಹಂಚಿಕೆ ಮಾಡಿದೆಯೇ; ಜೇಷ್ಠತೆ ಆಧಾರದ ಮೇಲೆ ಮತ್ತು ನಿವೇಶನ ಹೊಂದಿರದ ನೌಕರರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದೆಯೇ ಹಾಗೂ ಬಿಡಿಎ ವತಿಯಿಂದ ರಿಯಾಯಿತಿ ದರದಲ್ಲಿ ಪಡೆದಿರುವ ಜಮೀನನ್ನು ಅರ್ಹರಲ್ಲದವರಿಗೆ ನಿವೇಶನ ಹಂಚುವುದರ ಮುಖಾಂತರ ದುರುಪಯೋಗ ಪಡಿಸಿಕೊಂಡಿದ್ದಾರೆಯೇ? ಎಂಬುದರ ಬಗ್ಗೆ ತನಿಖೆ ನಡೆಸಿ ವರದಿ

ಸಲ್ಲಿಸಲು ಡಾ॥ ಹೆಚ್. ಶಶಿಧರ್, ನಿವೃತ್ತಿ ಐ.ಎ.ಎಸ್. ಅಧಿಕಾರಿ ಇವರನ್ನು ಸರ್ಕಾರ ನೇಮಿಸಿ ಆದೇಶ ಹೊರಡಿಸಿರುತ್ತದೆ.

ಸದರಿ ಆದೇಶವನ್ನು ಪ್ರಶ್ನಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ ಕ್ಷೇಮಾಭಿವೃದ್ಧಿ ಸಂಘವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 40081/2013 ರಲ್ಲಿ ದಾಖಲಿಸಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ : 10-09-2013 ರಂದು ಮೇಲಿನ ಸರ್ಕಾರಿ ಆದೇಶಕ್ಕೆ ತಡೆಯಾಜ್ಞೆ ನೀಡಿದ್ದು, ಪ್ರಕರಣವು ನ್ಯಾಯಲಯದಲ್ಲಿ ವಿಚಾರಣೆ ಬಾಕಿ ಇರುತ್ತದೆ.

ಹಂಚಿಕೆಯಾಗಿರುವ ನಿವೇಶನಗಳು

40(134); ಡಾ॥ ಶಿವರಾಜ್ ಪಾಟೀಲ್ ಎಸ್. (ರಾಯಚೂರು)

ಅ) ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ದಿನಾಂಕ 19-04-2006 ರ ಸರ್ಕಾರಿ ಆದೇಶದನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ನಿವೇಶನಗಳನ್ನು ಹಂಚಿರುವುದು ನಿಜವೇ; ಹಾಗಿದ್ದಲ್ಲಿ, ಎಷ್ಟು ನೌಕರ ಸದಸ್ಯರುಗಳಿಗೆ ಯಾವ ಅಳತೆಯುಳ್ಳ ನಿವೇಶನಗಳನ್ನು ಎಲ್ಲೆಲ್ಲಿ ವಿತರಿಸಲಾಗಿದೆ. (ನೌಕರ ಸದಸ್ಯರ ಹೆಸರು, ಸದಸ್ಯತ್ವ ಸಂಖ್ಯೆ ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಯನ್ನು ನೀಡುವುದು)

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಲ್ಲದೇ ಇತರ ಎರವಲು ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು, ಬೇರೆ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ನಿವೇಶನಗಳನ್ನು ವಿತರಿಸಲಾಗಿದೆಯೇ; ಇದಕ್ಕೆ ಸಂಘದ ಬೈಲಾದಿಂದಾಗಲೀ ಅಥವಾ ಸರ್ಕಾರದಿಂದಾಗಲೀ ಅಥವಾ ಪ್ರಾಧಿಕಾರದ ಸಭೆಯ ಅನುಮತಿ ಪಡೆಯಲಾಗಿದೆಯೇ (ಹೆಸರು,